JUL 2016

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ4(2):ಪ್ರೌಶಾಶಿ:ಒಓಡಿ:22/2016-17 ದಿನಾಂಕ:08/07/2016

**ಸುತ್ತೋಲೆ**

ವಿಷಯ: ಭಾರತ್ ಜ್ಞಾನ ವಿಜ್ಞಾನ ಸಮಿತಿ , ಬೆಂಗಳೂರು ಇವರು ದಿನಾಂಕ:25-07-2016 ಮತ್ತು ದಿನಾಂಕ:26-07-2016 ರಂದು ಆಯೋಜಿಸಿರುವ ಶೈಕ್ಷಣಿಕ ಸಮಾವೇಶದಲ್ಲಿ ಭಾಗವಹಿಸುವ ಆಸಕ್ತ ಶಿಕ್ಷಕರಿಗೆ ಅನ್ಯ ಕಾರ್ಯನಿಮಿತ್ತ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ

ಉಲ್ಲೇಖ: ಕಾರ್ಯದರ್ಶಿಗಳು, ಭಾರತ್ ಜ್ಞಾನ ವಿಜ್ಞಾನ ಸಮಿತಿ , ಬೆಂಗಳೂರು ರವರ ಪತ್ರ ದಿನಾಂಕ:29/06/2016

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತೀಯ ಜ್ಞಾನ ವಿಜ್ಞಾನ ಸಮಿತಿ ಕರ್ನಾಟಕ ಪ್ರಕಟಿಸುತ್ತಿರುವ ಟೀಚರ್ಸ್ ಶೈಕ್ಷಣಿಕ ಮಾಸಪತ್ರಿಕೆಯ ವಾರ್ಷಿಕೋತ್ಸವವನ್ನು 14 ನೇ ರಾಜ್ಯಮಟ್ಟದ ಶೈಕ್ಷಣಿಕ ಹಬ್ಬವಾಗಿ ದಿನಾಂಕ:25/07/2016 ರಿಂದ 26/07/2016 ರ ವರೆಗೆ 2 ದಿನಗಳ ಕಾಲ ಧಾರವಾಡದಲ್ಲಿ ಆಯೋಜಿಸಿರುವ ಟೀಚರ್ಸ್ ಶೈಕ್ಷಣಿಕ ಮಾಸಪತ್ರಿಕೆಯ ವಾರ್ಷೀಕೋತ್ಸವದಲ್ಲಿ ಭಾಗವಹಿಸುವ ಆಸಕ್ತ ಶಿಕ್ಷಕರಿಗೆ ಅನ್ಯಕಾರ್ಯ ನಿಮಿತ್ತ ಸೌಲಭ್ಯವನ್ನು ಮಂಜೂರು ಮಾಡಲು ಕೋರಿರುತ್ತಾರೆ.

ಈ ಕುರಿತು ಪರಿಶೀಲಿಸಿ, ದಿನಾಂಕ:25/07/2016 ರಿಂದ 26/07/2016 ರ ವರೆಗೆ 2 ದಿನಗಳ ಕಾಲ ಧಾರವಾಡದಲ್ಲಿ 14 ನೇ ಶೈಕ್ಷಣಿಕ ಹಬ್ಬದಲ್ಲಿ ಭಾಗವಹಿಸುವ ಆಸಕ್ತ ಶಿಕ್ಷಕರಿಗೆ ಅನ್ಯಕಾರ್ಯ ನಿಮಿತ್ತ ಸೌಲಭ್ಯವನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡಲು ಅನುಮತಿಸಿದೆ

1. ಶಿಕ್ಷಕರ ಸ್ವಂತ ಜವಾಬ್ದಾರಿಯ ಮೇಲೆ ಆಸಕ್ತ ಶಿಕ್ಷಕರು ಶೈಕ್ಷಣಿಕ ಹಬ್ಬದಲ್ಲಿ ಭಾಗವಹಿಸಬಹುದು.
2. ಸದರಿ ಶೈಕ್ಷಣಿಕ ಸಮಾವೇಶದಲ್ಲಿ ಭಾಗವಹಿಸುವ ಶಿಕ್ಷಕರು ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ನಷ್ಟವಾಗುವ ಪಾಠ ಪ್ರವಚನಗಳನ್ನು ಹೆಚ್ಚುವರಿ ತರಗತಿಗಳನ್ನು ತೆಗೆದುಕೊಂಡು ಸರಿದೂಗಿಸುವ ಷರತ್ತಿಗೆ ಒಳಪಟ್ಟು ಅನುಮತಿಸಿವುದು.
3. ಇಲಾಖೆಯಿಂದ ಯಾವುದೇ ಭತ್ಯೆಗಳನ್ನು ಭರಿಸಲು / ಡ್ರಾ ಮಾಡಲು ಅನುಮತಿಸಿರುವುದಿಲ್ಲ.
4. ಯಾವುದೇ ಕಾರಣಕ್ಕೂ ಮೇಲೆ ಹೇಳಿದ ವಿಷಯಗಳಿಗೆ ಸಂಬಂಧಿಸಿದಂತೆ ದಕ್ಕೆಯಾಗಬಾರದು.

(ಸಹಿ)
ನಿರ್ದೇಶಕರು (ಪ್ರೌಢಶಿಕ್ಷಣ)

ಪ್ರತಿಯನ್ನು:-

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
2. ಕಾರ್ಯದರ್ಶಿಗಳು, ಭಾರತ್ ಜ್ಞಾನ ವಿಜ್ಞಾನ ಸಮಿತಿ , ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಕ್ಯಾಂಪಸ್ ಬೆಂಗಳೂರು-560012
3. ಕಛೇರಿ ಪ್ರತಿ.

14516
21/07/16